# ಸುದ್ದಿಸಂಚಯ

## ಕೇರಳದಲ್ಲಿ ರಾಮಕೃಷ್ಣ ಭಕ್ತಸಮ್ಮೇಳನ

ಪ್ರಥಮ ಬಾರಿಗೆ ಸಮಗ್ರ ಕೇರಳ ಶ್ರೀರಾಮಕೃಷ್ಣ ಭಕ್ತ ಸಮ್ಮೇಳನವು ಇದೇ ಮೇ ತಿಂಗಳು ೧೧ ಮತ್ತು ೧೨ರಂದು ಎರ್ನಾಕುಲಂನಲ್ಲಿ ನಡೆಯಿತು. ೩೫೦೦ಕ್ಕೂ ಹೆಚ್ಚು ಭಕ್ತರು ಅದರಲ್ಲಿ ಭಾಗ ವಹಿಸಿದ್ದರು.

ಕೇರಳ ರಾಜ್ಯವು ಶ್ರೀಮತ್ ಸ್ವಾಮಿ ರಂಗನಾಥಾನಂದರು, ಸ್ವಾಮಿ ತಪಸ್ಯಾನಂದರಂತಹ ಶ್ರೇಷ್ಠ ಸಂನ್ಯಾಸಿಗಳನ್ನು ರಾಮಕೃಷ್ಣ ಮಹಾಸಂಘಕ್ಕೆ ನೀಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೇರಳದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರವು ತುಂಬ ಸ್ಥಗಿತಗೊಂಡಿದೆ. ಅದನ್ನು ಚುರುಕುಗೊಳಿಸುವ ಸಲುವಾಗಿ ಈ ಭಕ್ತ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನು ಆಯೋಜಿಸಿದವರು ವೈತಿಲ್ಲದಲ್ಲಿರುವ ರಾಮಕೃಷ್ಣ ಆಶ್ರಮದವರು. ಇದರಲ್ಲಿ ಕೇರಳದ ರಾಮಕೃಷ್ಣ ಕೇಂದ್ರಗಳೆಲ್ಲವೂ ಸಕ್ರಿಯವಾಗಿ ಭಾಗ ವಹಿಸಿವೆ. ಇದರ ಪರಿಣಾಮವಾಗಿ ರಾಮಕೃಷ್ಣ-ವಿವೇಕಾನಂದ ಭಾವ ಪ್ರಚಾರಕ್ಕೆ ವಿಶೇಷ ಚಾಲನೆ ದೊರೆಯಿತೆನ್ನುವುದಕ್ಕೆ ಸಮ್ಮೇಳನದ ಯಶಸ್ಸೇ ಸಾಕ್ಷಿಯಾಗಿದೆ.

ರಾಮಕೃಷ್ಣ ಮಹಾಸಂಘದ ವಿಶ್ವಸ್ಥ ಮಂಡಳಿಯ ಸದಸ್ಯರೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆಗಿರುವ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಸ್ವಾಮಿ ತತ್ತ್ವಬೋಧಾನಂದಜಿ, ಸ್ವಾಮಿ ಆತ್ಮಾರಾಮಾನಂದಜಿ, ಸ್ವಾಮಿ ಶಕ್ರಾನಂದಜಿ, ಸ್ವಾಮಿ ಆತ್ಮವಿದಾನಂದಜಿ ಮುಂತಾದವರು ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಮತ್ತು ಸ್ವಾಮಿ ವಿವೇಕಾನಂದ ಇವರ ಜೀವನ ಮತ್ತು ಸಂದೇಶಗಳ ಕುರಿತಾಗಿ ಮಾತನಾಡಿ ಭಕ್ತರಲ್ಲಿ ದಿವ್ಯತ್ರಯರ ಬಗ್ಗೆ ಹೊಸ ಜಾಗೃತಿಯನ್ನು ಉಂಟುಮಾಡಿದರು. ಭಜನೆ ಮತ್ತು ಕೇರಳದ ಶ್ರೀಮಂತ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮ್ಮೇಳನದ ವಿಶೇಷ ಆಕರ್ಷಣೆಗಳಾಗಿದ್ದವು. ❄

## ಗುಜರಾತಿನಲ್ಲಿ ಭೂಕಂಪ ಪರಿಹಾರಕಾರ್ಯ

೨೬.೦೧.೨೦೦೧ರಲ್ಲಿ ಸಂಭವಿಸಿದ ಅಭೂತಪೂರ್ವ ಭೂಕಂಪದಿಂದ ಗುಜರಾತಿನಲ್ಲಿ ಸಾವಿರಾರು ಜನರು ಅಸುನೀಗಿದರು, ಲಕ್ಷಾಂತರ ಜನರು ಮನೆ, ಮಠ, ಆಸ್ತಿ ಕಳೆದು ಕೊಂಡರು. ಗುಜರಾತಿನ ರಾಜಕೋಟ್, ಪೋರಬಂದರ್ ಮತ್ತು ಲಿಂಬ್ಡಿ ನಗರಗಳಲ್ಲಿರುವ ರಾಮಕೃಷ್ಣ ಆಶ್ರಮಗಳು ಪ್ರಾರಂಭದಿಂದಲೂ ಪರಿಹಾರ ಕಾರ್ಯವನ್ನು ನಡೆಸುತ್ತಿವೆ. ಪ್ರಾಥಮಿಕ ಪರಿಹಾರ ಕಾರ್ಯಕ್ಕೆ ತಗುಲಿದ ಖರ್ಚು ಮೂರು ಕೋಟಿ ರೂಪಾಯಿಗಳು. ಈಗ ಭೂಕಂಪಕ್ಕೊಳಗಾದ ಅನೇಕ ಪ್ರದೇಶಗಳಲ್ಲಿ ಪುನರ್ವಸತಿ ಕಾರ್ಯಕ್ರಮ ಮುಂದುವರಿಯುತ್ತಿದೆ. ಈಗಾಗಲೇ ೪೩ ಶಾಲಾ ಕಟ್ಟಡಗಳ ನಿರ್ಮಾಣ ಮುಗಿದಿದ್ದು ಅವುಗಳ ಉದ್ಘಾಟನೆಯೂ ಆಗಿದೆ. ಭರ್ವಾಡಾ ಮತ್ತು ಧನೇತಿಯಲ್ಲಿ ಕ್ರಮವಾಗಿ ೩೦ ಮನೆಗಳು, ಒಂದು ಸಾಮೂಹಿಕ ಭವನ ಇರುವ, ಮತ್ತು ೨೧೦ ಮನೆಗಳು, ಮತ್ತು ಒಂದು ಪ್ರಾರ್ಥನಾಲಯ ಮತ್ತು ಸಾಮೂಹಿಕ ಭವನ ಇರುವ ಎರಡು ಹೌಸಿಂಗ್ ಕಾಲೋನಿಗಳು ಆಗಲೇ ಉದ್ಘಾಟಿಸಲ್ಪಟ್ಟಿವೆ. ಬೇರೆ ಬೇರೆ ಪ್ರದೇಶಗಳಲ್ಲಿ ಶಾಲೆಗಳ ಮತ್ತು ಮನೆಗಳ ನಿರ್ಮಾಣಕಾರ್ಯ ಭರದಿಂದ ಸಾಗುತ್ತಿದೆ. ಇದುವರೆಗೆ ೧೫.೮ ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ❄

## ವಸಂತ ವಿಹಾರ

ಮಕ್ಕಳಿಗೆ ಸಾಂಪ್ರದಾಯಿಕ ಮೌಲ್ಯಗಳನ್ನೂ ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನೂ ಕಲಿಸಿಕೊಡುವುದು ಹಿರಿಯರ ಮೇಲಿರುವ ಅತ್ಯಂತ ಗುರುತರವಾದ ಜವಾಬ್ದಾರಿ. ಎಳೆಯ ವಯಸ್ಸಿನಲ್ಲಿಯೇ ಅವರ ಮನಸ್ಸಿನಲ್ಲಿ ಉದಾತ್ತ ಭಾವನೆಗಳನ್ನು ನೆಟ್ಟರೆ ಅವರು ಮುಂದೆ ಉತ್ತಮ ಪ್ರಜೆಗಳಾಗಿ ದೇಶಕ್ಕೆ ಕೀರ್ತಿಯನ್ನು ತರುವುದರಲ್ಲಿ ಸಂದೇಹವೇ ಇಲ್ಲ. ಅದಿಲ್ಲದೆ ಇದ್ದರೆ ಅವರು ಮುಂದೆ ಸಮಾಜಕಂಟಕರಾಗಬಹುದು, ಮತ್ತು ಕ್ರಮೇಣ ಇಡೀ ಸಮಾಜವೇ ಹಾಳಾಗಬಹುದು. ಆದ್ದರಿಂದ ಮಕ್ಕಳಿಗೆ ಸರಿಯಾದ ರೀತಿಯ ತರಬೇತಿಯನ್ನು ನೀಡುವುದು ಅತ್ಯಾವಶ್ಯಕ.

ಇಂದಿನ ಧಾವಂತ ಸಮಾಜದ ಕೌಟುಂಬಿಕ ವಲಯದಲ್ಲಿ ಈ ತರಬೇತಿ ಮಕ್ಕಳಿಗೆ ದೊರೆಯುವುದು ಅಪರೂಪ. ಈ ಕೊರತೆಯನ್ನು ಪೂರೈಸುವ ಉದ್ದೇಶದಿಂದಲೇ "ವಸಂತ ವಿಹಾರ"—ಎಂಬ ಮಕ್ಕಳ ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಹಮ್ಮಿಕೊಂಡಿದೆ. ಹೋದ ವರ್ಷ ಹಾಗೂ ಈ ವರ್ಷ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಒಳ್ಳೆಯ ಪ್ರತಿಕ್ರಿಯೆ ಮೂಡಿ ಬಂದಿರುವುದು ಪ್ರೋತ್ಸಾಹದಾಯಕವಾಗಿದೆ.

ಈ ವರ್ಷದ ಶಿಬಿರವನ್ನು ಮೇ ಒಂದರಿಂದ ಹತ್ತನೆ ತಾರೀಖಿನವರೆಗೆ ನಡೆಸಲಾಯಿತು. ಪ್ರತಿದಿನ ಬೆಳಗ್ಗೆ ಯೋಗಾಸನ ಅಭ್ಯಾಸದೊಂದಿಗೆ ಪ್ರಾರಂಭವಾದ ಶಿಬಿರ ಭಜನೆ-ಧ್ಯಾನ, ಉಪನ್ಯಾಸ, ಶ್ರಮದಾನ, ಉಪಾಹಾರ ಮುಂತಾದ ಕಾರ್ಯಕ್ರಮಗಳ ಮೂಲಕ ಮುಂದುವರಿದು ಶಿಬಿರಾರ್ಥಿಗಳ ಕಲಿಕೆ ಹಾಗೂ ಮನರಂಜನೆಗಾಗಿ ದೃಕ್-ಶ್ರವಣ ಮಾಧ್ಯಮದಲ್ಲಿ ಶ್ರೀರಾಮಕೃಷ್ಣ ಕಥಾರೂಪಕ, ರಾಮಾಯಣ, ಭವ್ಯಭಾರತ ಕಂಡ ಸಹಸ್ರಮಾನ ಹಾಗೂ ವ್ಯಕ್ತಿತ್ವ ವಿಕಸನದ ಚಿತ್ರಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಶಿಬಿರಾರ್ಥಿಗಳೆಲ್ಲರೂ ಸ್ವಾಮಿ ವಿವೇಕಾನಂದರ ಸ್ವದೇಶ ಮಂತ್ರವನ್ನು ಪಠಿಸಿದ ನಂತರ ಪ್ರತಿದಿನದ ಕಾರ್ಯಕ್ರಮವು ಮುಕ್ತಾಯವಾಗುತ್ತಿತ್ತು. ❄